ಓ.ಎಸ್. ನಂಬರ 39/2019

ಪಿ.ಡಬ್ಲ್ಯೂ-1

ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. ದಿನಾಂಕಃ 16-11-2023.

**ಮುಂದುವರೆದ ಪಾಟೀ ಸವಾಲು ಃ 1 ಮತ್ತು 2 ನೇ ಪ್ರತಿವಾದಿಗಳ ಪರ ಶ್ರೀ ಬಿ.ಎಫ್.ಪಿ. ವಕೀಲರಿಂದಃ**

1 ನೇ ಪ್ರತಿವಾದಿಗೆ ಅವರ ತಂದೆಯವರು ತಟ್ಟಿಹಳ್ಳಿ ಗ್ರಾಮದ ಸರ್ವೆ ನಂ. 42 ರ 4 ಎಕರೆ ಜಮೀನನ್ನು ಮೃತ್ಯುಪತ್ರದ ಮೂಲಕ ಕೊಟ್ಟಿರುತ್ತಾರೆ ಎಂದು ನನಗೆ ಮಾಹಿತಿ ಇರುವುದಿಲ್ಲ. 1 ನೇ ಪ್ರತಿವಾದಿಯು ಸದ್ರಿ 4 ಎಕರೆ ಜಮೀನಿನಲ್ಲಿ ಕಬಜಾ ವಹಿವಾಟಿನಲ್ಲಿ ಇರುತ್ತಾನೆ ಎಂದು ನನಗೆ ಗೊತ್ತಿರುವುದಿಲ್ಲ. ಸಾಕ್ಷಿಯು ಮುಂದುವರೆದು 1 ನೇ ಪ್ರತಿವಾದಿಯರ ತಂದೆಯು ಸರ್ವೆ ನಂ. 38 ರಲ್ಲಿನ ಜಮೀನನ್ನು ಮೃತ್ಯುಪತ್ರದ ಮೂಲಕ 1 ನೇ ಪ್ರತಿವಾದಿಗೆ ಕೊಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. 1 ನೇ ಪ್ರತಿವಾದಿಯು 2 ನೇ ಪ್ರತಿವಾದಿಯೊಂದಿಗೆ 1993 ರಲ್ಲಿ ಮದುವೆ ಆದ ನಂತರ ಮಸ್ಕತ್ ದಲ್ಲಿ ವಾಸವಾಗಿರುತ್ತಾರೆ ಎಂದರೆ ನಿಜ. ಆಗಿನಿಂದ 1 ನೇ ಪ್ರತಿವಾದಿಯ ಜಮೀನನ್ನು ನೀವೇ ಸಾಗುವಳಿ ಮಾಡುತ್ತಾ ಬಂದಿರುತ್ತಿರಿ ಎಂದರೆ ಸಾಕ್ಷಿಯು 2004 ನೇ ಇಸ್ವಿಯಿಂದ ನಾವು ಸಾಗುವಳಿ ಮಾಡುತ್ತಾ ಬಂದಿದ್ದು ಅದಕ್ಕಿಂತ ಮುಂಚೆ 1 ನೇ ಪ್ರತಿವಾದಿಯರ ತಂದೆಯವರು ಸಾಗುವಳಿ ಮಾಡುತ್ತಾ ಬಂದಿರುತ್ತಾರೆ ಎಂದು ನುಡಿದಿರುತ್ತಾರೆ. 1 ನೇ ಪ್ರತಿವಾದಿಯರಿಗೆ ಬಂದ 4 ಎಕರೆ ಜಮೀನಿನಲ್ಲಿ ಅಡಿಕೆ ತೋಟವನ್ನು ಅದರಿಂದ ಬಂದ ಉತ್ಪನ್ನದಿಂದ ನಾನೇ ಅಭಿವೃದ್ಧಿಪಡಿಸಿರುತ್ತೇನೆ. ಸಾಕ್ಷಿಯು ಮುಂದುವರೆದು ಯಲ್ಲಾಪುರ ನ್ಯಾಯಾಲಯದಲ್ಲಿ ಒಂದು ದಾವೆ ದಾಖಲಾಗಿದ್ದು, ಅದನ್ನು ನಾನೇ ನಡೆಸಿರುತ್ತೇನೆ ಎಂದು ನುಡಿದಿರುತ್ತಾರೆ.

2. ಮುಂಡಗೋಡದಲ್ಲಿರುವ ಆಸ್ತಿ ಸಂಖ್ಯೆ 117/1 ಮತ್ತು 117/1 ಎ ಇವುಗಳು 1 ನೇ ಪ್ರತಿವಾದಿಯರ ಹೆಸರಿನಲ್ಲಿ ಇವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯರು ಮಸ್ಕತ್ ನಲ್ಲಿ ವಾಸವಿರುವುದರಿಂದ ಎರಡೂ ಮನೆಗಳನ್ನು ಭಾಡಿಗೆ ಕೊಡುವುದನ್ನು ಮತ್ತು ಅವುಗಳಿಂದ ಬಂದ ಭಾಡಿಗೆ ಹಣವನ್ನು ಉಪಯೋಗಿಸಲು ನನಗೇ ಹೇಳಿದ್ದರು ಎಂದರೆ ನಿಜ. 1999 ನೇ ಇಸ್ವಿಯಿಂದ ಸದ್ರಿ ಮನೆಗಳಿಗೆ ಬರುವ ಭಾಡಿಗೆ ಹಣವನ್ನು 2018 ನೇ ಇಸ್ವಿಯವರೆಗೆ ನೀವೇ ಬಳಸಿಕೊಂಡಿರುತ್ತಿರಿ ಎಂದರೆ ಸರಿಯಲ್ಲ. ಪ್ರತಿವಾದಿಯವರು ಮಸ್ಕತ್ ದಿಂದ ಬಂದು 2018 ನೇ ಇಸ್ವಿಯಿಂದ ಮುಂಡಗೋಡದಲ್ಲಿ ಖಾಯಂ ಆಗಿ ವಾಸವಾಗುತ್ತಿದ್ದಾರೆ ಎಂದರೆ ನಿಜ. 1 ನೇ ಪ್ರತಿವಾದಿಯವರು ಮುಂಡಗೋಡಿಗೆ ಬಂದಿಂದನಿಂದ ದಾವಾಸ್ತಿಯನ್ನು ಮತ್ತು ಅವರ ತಂದೆ ಅವರಿಗೆ ನೀಡಿದ 4 ಎಕರೆ ಜಮೀನನ್ನು ತಾವೇ ಸಾಗುವಳಿ ಮಾಡುತ್ತಾ ಬರುತ್ತಿದ್ದಾರೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಎರಡೂ ಮನೆಗಳ ಭಾಡಿಗೆಯನ್ನು 2018 ನೇ ಇಸ್ವಿಯಿಂದ 1 ನೇ ಪ್ರತಿವಾದಿಯರೇ ಪಡೆದುಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು ರಾಧಾಮಣಿ ದಿವಾಕರನ್ (ಪ್ರತಿವಾದಿ 1) ರವರ ಆಸ್ತಿಯ ಕುರಿತು ದಾವೆಯನ್ನು ದಾಖಲಿಸಿರುತ್ತೇನೆ. ನಾನು ಸರ್ವೆ ನಂ. 78 ಗೆ ಸಂಬಂಧಿಸಿ ದಾವೆಯನ್ನು ದಾಖಲಿಸಿರುತ್ತೇನೆ. ಸದ್ರಿಯದು 2 ನೇ ಪ್ರತಿವಾದಿಯರ ಹೆಸರಿನಲ್ಲಿ ಇದೆ. ದಾವಾಸ್ತಿಯಲ್ಲಿ 4 ಎಕರೆ ಅಡಿಕೆ ತೋಟ ಇದೆ ಎಂದರೆ ನಿಜ. ಸದ್ರಿಯದರಲ್ಲಿ ಅಡಿಕೆ ಫಸಲು ಕಳೆದ 4 ವರ್ಷಗಳಿಂದ ಬರುತ್ತಿದೆ ಎಂದರೆ ನಿಜ. ಸದ್ರಿ ಜಮೀನಿನಿಂದ ವರ್ಷಕ್ಕೆ

5 ಲಕ್ಷ ರೂಪಾಯಿ ಆದಾಯ ಬರುತ್ತದೆ. ನೀವು 2019 ನೇ ಇಸ್ವಿಯವರೆಗೆ ಅಡಿಕೆ ಫಸಲಿನಿಂದ ಬಂದ ಆದಾಯವನ್ನು ಪಡೆದಿರುತ್ತಿರಿ ಎಂದರೆ ಸಾಕ್ಷಿಯು ಪ್ರತಿವಾದಿಯರು ನನ್ನನ್ನು 2018 ನೇ ಇಸ್ವಿಯಲ್ಲಿ ಬಿಡಿಸಿಬಿಟ್ಟಿದ್ದರು ಎಂದು ನುಡಿದಿರುತ್ತಾರೆ. 1999 ನೇ ಇಸ್ವಿಯಿಂದ ದಾವಾಸ್ತಿಯಲ್ಲಿನ 5 ಎಕರೆ ಭತ್ತದ ಫಸಲನ್ನು ಮತ್ತು 1 ನೇ ಪ್ರತಿವಾದಿಯವರಿಗೆ ಅವರ ತಂದೆ ಕೊಟ್ಟ 4 ಎಕರೆಯಲ್ಲಿನ ಭತ್ತದ ಫಸಲನ್ನು 2018 ನೇ ಇಸ್ವಿಯವರೆಗೆ ಪಡೆದುಕೊಂಡಿರುತ್ತಿರಿ ಎಂದರೆ ಸಾಕ್ಷಿಯು 2004 ನೇ ಇಸ್ವಿಯಿಂದ ಮಾತ್ರ ಪಡೆದುಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ. ಸದ್ರಿ ಜಮೀನುಗಳಿಂದ ಬಂದ ಉತ್ಪನ್ನದಿಂದ ಅಡಿಕೆ ತೋಟವನ್ನು ಅಭಿವೃದ್ದಿಪಡಿಸಿರುತ್ತೇನೆ ಎಂದರೆ ನಿಜ. ದಾವಾಸ್ತಿಯಲ್ಲಿ 6 ಬೋರವೆಲ್ ಗಳು ಇವೆ. ಸದ್ರಿಯವುಗಳನ್ನು ಕೊರೆಯಲು 1 ನೇ ಪ್ರತಿವಾದಿಯರು ಹಣವನ್ನು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಅವರು ಒಂದು ರೂಪಾಯಿಯನ್ನೂ ಸಹ ಕೊಟ್ಟಿರುವುದಿಲ್ಲ ಎಂದು ನುಡಿದಿರುತ್ತಾರೆ. ಪ್ರತಿವಾದಿಯರು ಮರಳಿ ಬಂದು ದಾವಾಸ್ತಿಯನ್ನು 1 ನೇ ಪ್ರತಿವಾದಿಯರಿಗೆ ಬಂದ ಜಮೀನನ್ನು ನಿಮ್ಮಿಂದ ಕಬಜೆಗೆ ಪಡೆದಿದ್ದರಿಂದ ಅವರ ವಿರುದ್ಧ ಪ್ರಸ್ತುತ ದಾವೆಯನ್ನು ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ. 2018 ನೇ ಇಸ್ವಿಯವರೆಗೆ ಪ್ರತಿವಾದಿಯವರೊಂದಿಗೆ ನಿಮ್ಮ ಸಂಬಂಧ ಚೆನ್ನಾಗಿತ್ತು, ನಂತರ ಕಳಚಿರುತ್ತದೆ ಎಂದರೆ ಸಾಕ್ಷಿಯು 2018 ರವರೆಗೆ ಅವರು ನಮ್ಮ ಮನೆಯಲ್ಲಿಯೇ ವಾಸವಾಗಿದ್ದರು ಎಂದು ನುಡಿದಿರುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಕಲ್ಪಿಸಲಾಯಿತು.**

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ. ಸರಿ ಇದೆ.

Sd/-

**ಸಿವಿಲ್ ಜಡ್ಜ, ಮುಂಡಗೋಡ.**